# ಸಂಪಾದಕೀಯ

ಸಮಸ್ತ ನಾಗರಿಕ ಸಮಾಜ ಏಳಿಗೆಯ ಪಥದಲ್ಲಿ ಸಾಗಬೇಕಾದಲ್ಲಿ ಲಿಂಗ ಸಮಾನತೆಯ ತತ್ವವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಸ್ವಾಮಿ ವಿವೇಕಾನಂದರ ವಿಚಾರಧಾರೆಯಂತೆ “ಮಹಿಳೆ ಸಮಾಜದಲ್ಲಿ ಪುರುಷನಷ್ಟೇ ಸಮಾನವಾದ ಸ್ಥಾನಮಾನವನ್ನು ಹೊಂದಿರಬೇಕು. ಸಮಾಜವು ಕೇವಲ ಪುರುಷನಿಂದ ಮಾತ್ರ ಪ್ರಗತಿ ಹೊಂದಲಾರದು. ಸ್ತ್ರೀ ಶಕ್ತಿಯೂ ಕೂಡ ಸಮಾಜದ ಏಳಿಗೆಯ ದೃಷ್ಟಿಯಿಂದ ಮಹತ್ವವಾದುದು.

ಪ್ರಜಾಸತ್ತಾತ್ಮಕ ವಿಚಾರಧಾರೆಗಳಿಗೆ ಆದ್ಯತೆ ನೀಡುವುದು ಪ್ರಜ್ಞಾವಂತ ಸಮಾಜದ ಪ್ರಥಮ ಆದ್ಯತೆಯಾಗಿರಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸಮಾಜದ ರಚನಾತ್ಮಕ ಬೆಳವಣಿಗೆಯಲ್ಲಿ ಲಿಂಗಭೇದವನ್ನು ಮೀರಿ ನಿಲ್ಲುವ ವಿಚಾರಧಾರೆ ಅತ್ಯಗತ್ಯವಾಗಿದೆ.

ಪ್ರಾಚೀನ ಕಾಲಘಟ್ಟದಿಂದಲೂ ಸ್ತ್ರೀಯರು ತಮ್ಮ ವಿಚಾರಗಳ ಅಭಿವ್ಯಕ್ತಿಯಲ್ಲಿ ಹಾಗೂ ತಮ್ಮ ಆಶೋತ್ತರಗಳನ್ನು ಪೂರೈಸಿಕೊಳ್ಳುವಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಕಾರಣದಿಂದಾಗಿ ಅನೇಕ ತೊಡಕುಗಳನ್ನು ಎದುರಿಸುತ್ತಾ ಬಂದಿದ್ದಾರೆ.

ಆಧುನಿಕ ಕಾಲಘಟ್ಟದಲ್ಲಿಯೂ ಸಹ ಮಹಿಳೆ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದರೂ ಸಹ ವೃತ್ತಿಯ ಆಯ್ಕೆಯಲ್ಲಿ ಪುರುಷರಿಗಷ್ಟೇ ಸೀಮಿತವಾಗಿ ಉಳಿದಿದ್ದ ಅನೇಕ ಕ್ಷೇತ್ರಗಳಲ್ಲಿ ಇಂದು ಮಹಿಳೆಯರೂ ಸಹ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿರುವುದು ನಿಜಕ್ಕೂ ಆಶಾದಾಯಕ ಬೆಳವಣಿಗೆ.

ಕಲೆ, ಸಾಹಿತ್ಯ, ವಿಜ್ಞಾನ-ತಂತ್ರಜ್ಞಾನ, ವೈದ್ಯಕೀಯ ಕ್ಷೇತ್ರಗಳ ಜೊತೆ ಜೊತೆಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗೆ ಹೆಗಲೆಣೆಯಾಗಿ ಕಾರ್ಯ ನಿರ್ವಹಿಸುತ್ತಾ ಸಮಾಜದ ಏಳಿಗೆಗೆ ಮಹತ್ವದ ಕೊಡುಗೆಯನ್ನು ನೀಡುತ್ತಿದ್ದಾರೆ.

ಪ್ರತಿ ವರ್ಷ ಮಾರ್ಚ್ ೦೮ರಂದು ವಿಶ್ವದಾದ್ಯಂತ ಅಂತರ್ ರಾಷ್ಟ್ರೀಯ “ಮಹಿಳಾ ದಿನ”ವನ್ನು ಆಚರಿಸಲಾಗುತ್ತದೆ. ಈ ದಿನದಂದು ಸಾಮಾಜಿಕ, ರಾಜಕೀಯ ಆರ್ಥಿಕ ಕ್ಷೇತ್ರಗಳಿಗೆ ಮಹಿಳೆಯರು ನೀಡಿದ ಕೊಡುಗೆಯನ್ನು ಸ್ಮರಿಸಲಾಗುತ್ತದೆ. ಸಮಾನತೆಯ ಸ್ಥಾಪನೆಯ ಮಹತ್ತರ ಆಶಯವನ್ನು ಹೊಂದಿರುವ ಈ ಬಗೆಯ ಆಚರಣೆಗಳಿಗೆ ತನ್ನದೇ ಆದ ಪ್ರಾಧಾನ್ಯತೆಯಿದೆ.

ಈ ನಿಟ್ಟಿನಲ್ಲಿ ಮನುಕುಲದ ಏಳಿಗೆಯಲ್ಲಿ ಸಮಾಜದ ಬಂಡಿಯನ್ನು ಮುನ್ನಡೆಸುವಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನ ನೆಲೆಯಲ್ಲಿ ಒಟ್ಟಿಗೆ ಮುಂದೆ ಸಾಗುವುದು ಅತ್ಯಗತ್ಯವಾಗಿದೆ.

ಪ್ರಸ್ತುತ ಸಂಚಿಕೆಯು ಕವಿತೆಗಳು, ವಲಸೆ ಸಾಹಿತ್ಯ,ಮಹಿಳಾ ಸಾಹಿತ್ಯ, ದಲಿತ ಕಾವ್ಯ, ಆಧುನಿಕ ವಚನಗಳಿಗೆ ಸಂಬಂಧಿಸಿದ ವಿಮರ್ಶಾತ್ಮಕ ಲೇಖನಗಳು ಸೇರಿದಂತೆ ಅನೇಕ ವೈವಿಧ್ಯಮಯ ಅಂಶಗಳಿಂದ ಕೂಡಿದ್ದು, ಸಹೃದಯರಾದ ತಾವು ಓದಿ ಪ್ರತಿಕ್ರಿಯಿಸಬೇಕೆಂದು ನಮ್ಮ ಬಳಗದ ವಿನಮ್ರ ಮನವಿ. ತಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ವಂದನೆಗಳೊಂದಿಗೆ, ಡಾ.ವಿವೇಕಾನಂದ ಸಜ್ಜನ